

ಡಾ.ವಿನೋದ ಛೆಬ್ಬಿ

**ತಮ್ಮಿಷ್ಟದಂತೆ ಬೆಳೆಯಲು ಪ್ರತಿಯೊಬ್ಬರಿಗೂ ಜನ್ಮಸಿದ್ಧ ಹಕ್ಕಿದೆ. ಇನ್ನೊಬ್ಬರ ಇಷ್ಟದಂತೆ ಬೆಳೆಯಲು ಆಗುವುದಿಲ್ಲ.**

# 107: ಬಾಂಧವ್ಯದ (ಕರಿ)ನೆರಳು

ಅಮಲಾ– ಅಂಗದರ ದಾಂಪತ್ಯ ಚಿಕಿತ್ಸೆ ನಡೆಯುತ್ತಿದೆ. ಅಂಗದ ಕಾಮಕೂಟದಲ್ಲಿ ಸ್ವಚ್ಛಂದತೆಯನ್ನು ತರಬೇಕಾದರೆ ಅಮಲಾ ಅವನ ವಿಧೇಯ ವ್ಯಕ್ತಿತ್ವದ ಭಾಗಕ್ಕೆ ವಿದಾಯ ಹೇಳಲೇಬೇಕು, ಹಾಗೂ ಅವನಿಗೆ ತನ್ನಿಷ್ಟದಂತೆ ಬೆಳೆಯಲು ಅವಕಾಶ ಕೊಡಲೇಬೇಕು ಎಂದು ಹೋದಸಲ ತಿಳಿಸಿದ್ದೆ. ಇದಕ್ಕೆ ಅಮಲಾಳ ಪ್ರತಿಕ್ರಿಯೆ ಹೇಗಿತ್ತು?

ಅಮಲಾ ಹೇಳಿದಳು. 'ಅಂಗದ್ ತನ್ನಷ್ಟಕ್ಕೆ ತಾನು ಬೆಳೆದರೆ, ತನ್ನಿಷ್ಟದಂತೆ ವರ್ತಿಸುತ್ತಿದ್ದರೆ ನನಗೇನೂ ಅಡ್ಡಿಯಿಲ್ಲ – ನನಗೆ ಖಂಡಿತವಾಗಿಯೂ ಹೆಮ್ಮೆಯಾಗುತ್ತದೆ. ವಿಷಯ ಏನೆಂದರೆ, ಅವನು ಬದಲಾದರೆ ನಾನೂ ಬದಲಾಗಬೇಕಾಗುತ್ತದೆ ಎಂದು ಹೇಳುತ್ತಿದ್ದೀರಿ. ನಾನು ಹೀಗೆಯೇ ನೆಮ್ಮದಿಯಿಂದ ಇರುವವಳು ಯಾಕೆ ಬದಲಾಗಬೇಕು ಎಂದು ಗೊತ್ತಾಗುತ್ತಿಲ್ಲ' ಎನ್ನುತ್ತಿದ್ದವಳು, ಏನೋ ಉಪಾಯ ಹೊಳೆದಂತೆ ಥಟ್ಟನೆ ಉದ್ಗರಿಸಿದಳು. 'ಹೀಗಾದರೆ ಹೇಗೆ? ಅಂಗದ್ ಬದಲಾಗುವುದನ್ನು ನಾನು ಗಮನಿಸಿಕೊಳ್ಳುತ್ತಿದ್ದು, ಅವನ ಪ್ರತಿ ಮಾರ್ಪಾಟೂ ನನಗೆ ಪೂರಕ ಆಗುವಂತೆ ನೋಡಿಕೊಂಡರೆ? ಅವನು ನಾನು ಬಯಸುವ ರೀತಿಯಲ್ಲೇ ಆಗುತ್ತಾನೆ. ಅಲ್ಲವೆ?' ಎಂದು ಅಂಗದನತ್ತ ನೋಡಿದಳು. ಅವಳು ಹೇಳಿದ್ದು ಹೇಗಿತ್ತು? ದರ್ಜಿ ಎದುರು ನಿಂತು ತನ್ನಳತೆಗೆ ತಕ್ಕಂತೆ ಬಟ್ಟೆ ಹೊಲಿಸಿಕೊಂಡಂತೆ ಇತ್ತು.

ಅಮಲಾ ಬದಲಾವಣೆ ಎಂದರೆ ಏನೆಂದು ಅಂದುಕೊಂಡಿದ್ದಾಳೆ ಎಂದು ಒಂದು ಕ್ಷಣ ಗೊಂದಲವಾಯಿತು. ಅದನ್ನು ಸ್ಪಷ್ಟಪಡಿಸಿಕೊಳ್ಳಲು ಕೇಳಿದೆ. 'ಅಮಲಾ, ನಿಮ್ಮ ಮಾತನ್ನು ಹೇಗೆ ಕೇಳಿಸಿಕೊಂಡೆ ಎಂದು ತಿಳಿಸುತ್ತೇನೆ. ಅಂಗದ್ ಬದಲಾವಣೆ ಹೊಂದಬೇಕು, ಅವನ ಬದಲಾವಣೆಯು ನಿಮಗೆ ತಕ್ಕಂತೆ ಇರಬೇಕು, ಹಾಗೂ ನೀವು ಬದಲಾಗದೆ ಹೀಗೆಯೇ ಇರಬೇಕು. ಅಲ್ಲವೆ?' ಆಕೆ ಹೌದೆಂದು ತಲೆ ಅಲ್ಲಾಡಿಸಿದಳು. ಇವಳನ್ನೀಗ ನೇರವಾಗಿಯೇ ಎದುರಿಸದ ಹೊರತು ವಿಧಿಯಿಲ್ಲ. 'ಅವರಲ್ಲಿ ಬದಲಾವಣೆ ತರಲು ಇಷ್ಟು ವರ್ಷ ಹೆಣಗಿದ್ದೀರಿ. ಯಶಸ್ಸು ಸಿಕ್ಕಿದೆಯೆ? (ಇಲ್ಲವೆಂಬಂತೆ ತಲೆ ಅಲ್ಲಾಡಿಸಿದಳು.) ಇದರರ್ಥ ಏನು? ಅವರಲ್ಲಿ ಬದಲಾವಣೆ ಆಗುವುದಾದರೆ ಅದು ನಿಮ್ಮ ಅಪೇಕ್ಷೆಯಂತೆ ಆಗಲಾರದು. ಅವರಿಷ್ಟದಂತೆ ಆಗಬೇಕು. ನಿಮ್ಮಿಷ್ಟದಂತೆ ಬದಲಾದರೆ ಅವರು ಅವರಾಗಿಯೇ ಉಳಿಯಲಾರರು.' ಆಕೆ ಮೊಂಡುತನದಿಂದ ಸಾಧ್ಯ ಯಾಕಿಲ್ಲ ಎನ್ನುವಂತೆ ಕೆಣಕುವ ನೋಟ ಬೀರಿದಳು. ಈಕೆಯ ಮನಮುಟ್ಟುವಂತೆ ಏನು ಉದಾಹರಣೆ ಕೊಡಬಹುದು ಎಂದು ಯೋಚಿಸಿದೆ.

'ಅಮಲಾ, ನೀವು ಉದ್ಯಾನದಲ್ಲಿ ಬೆಳೆದ ಗಿಡಗಳನ್ನು ಕತ್ತರಿಸಿ ಅದಕ್ಕೆ ಒಂದು ಪ್ರಾಣಿಯ ಆಕಾರ ಕೊಟ್ಟಿರುವುದನ್ನು ನೋಡಿದ್ದೀರಲ್ಲ?'

'ಹೌದು! ಮಕ್ಕಳನ್ನು ಪಾರ್ಕಿಗೆ ಕರೆದುಕೊಂಡು ಹೋದಾಗ ಅವರು ಪೊದೆಗಳನ್ನು ತೋರಿಸಿ, ಅಮ್ಮಾ ಆನೆ ನೋಡು, ಸಿಂಹ ನೋಡು ಎಂದು ಹೇಳುತ್ತಿರುತ್ತಾರೆ.'

'ಇಲ್ಲಿ ಏನಾಗಿದೆ ನೋಡಿ. ಪೊದೆ ಬೆಳೆದಿದೆಯೇನೋ ನಿಜ. ಆದರೆ ತನ್ನಿಷ್ಟದಂತೆ ಬೆಳೆದಿಲ್ಲ. ಮಾಲಿಯ ಇಷ್ಟದಂತೆ ಬೆಳೆದು ಆನೆಯೋ ಸಿಂಹವೋ ಆಗಿದೆ. ಹಾಗಾಗಿ ಅದು ಪೊದೆಯಾಗಿ ಉಳಿದಿಲ್ಲ. ಅಷ್ಟಲ್ಲದೆ, ಒಂದುವಾರ ಅದನ್ನು ಕತ್ತರಿಸದೆ ಬಿಟ್ಟರೆ ಟಿಸಿಲು ಒಡೆದು ಹೊರಚಾಚಿ ಅಸಹ್ಯ ಕಾಣುತ್ತದೆ. ಈಗ, ಆ ಪೊದೆಗೆ ಮಾತಾಡಲು ಬರುತ್ತಿತ್ತು ಎಂದುಕೊಳ್ಳಿ. ಅದಕ್ಕೆ ನೀನು ಯಾರು ಎಂದು ಕೇಳಿದರೆ ಏನು ಉತ್ತರಿಸುತ್ತಿತ್ತು? ಪೊದೆ ಎಂದೋ ಅಥವಾ ಪ್ರಾಣಿ ಎಂದೋ?' ಅಮಲಾ ಗೊಂದಲದಲ್ಲಿ ಬಿದ್ದಳು. 'ಇನ್ನು, ಪಕ್ಕದಲ್ಲಿ ಬೆಳೆದ ಮರವೊಂದನ್ನು ನೋಡಿ. ಕತ್ತರಿಯ ಸ್ಪರ್ಶವಿಲ್ಲದೆ ಹೇಗೆ ಸ್ವಚ್ಛಂದದಿಂದ ಬೃಹದಾಕಾರವಾಗಿ ಬೆಳೆದು ನಿಂತಿದೆ? ಅದಕ್ಕೇ ದೊಡ್ಡ ಮರದ ನೆರಳು ಹಾಯಾಗಿರುತ್ತದೆ. ಅದಕ್ಕಾಗಿಯೇ ಮರವನ್ನು ಹೀಗಿದ್ದರೆ ಚೆನ್ನಾಗಿರಬಹುದಾಗಿತ್ತು ಎಂದು ನಿರ್ಣಯಕ್ಕೆ ಒಳಪಡಿಸದೆ ಹೇಗಿದೆಯೋ ಹಾಗೆಯೇ ಒಪ್ಪಿಕೊಳ್ಳುತ್ತೇವೆ. ಇದರಿಂದೇನು ಗೊತ್ತಾಗುತ್ತದೆ? ಯಾವುದೇ ವ್ಯಕ್ತಿಯ ಬೆಳವಣಿಗೆಯಲ್ಲಿ ಕೈಹಾಕದೆ ಅವರಷ್ಟಕ್ಕೆ ಅವರನ್ನು ಬಿಟ್ಟಾಗ ಮಾತ್ರ ವೈಯಕ್ತಿಕ ಸಮಗ್ರತೆ ಹಾಗೂ ಪೂರ್ಣಸಾಮರ್ಥ್ಯ ಪ್ರಕಟವಾಗಲು ಸಾಧ್ಯವಿದೆ. ಬದಲಾಗಿ, ಅವರನ್ನು ಇನ್ನೊಬ್ಬರ ಇತಿಮಿತಿಗೆ ಒಳಪಡಿಸಿದರೆ ಅದೂ ಆಗದೆ, ಇದೂ ಆಗದೆ ಎಡಬಿಡಂಗಿಯಾಗುತ್ತಾರೆ, ಅಷ್ಟೆ. ಒಂದು ವಿಷಯ ನೆನಪಿಡಿ: ತಮ್ಮಿಷ್ಟದಂತೆ ಬೆಳೆಯುವುದು ಪ್ರತಿಯೊಬ್ಬರ ಜನ್ಮಸಿದ್ಧ ಹಕ್ಕು. ಅದು ಇನ್ನೊಬ್ಬರ ಪ್ರಕಾರ ಆಗುವುದಿಲ್ಲ – ಅವರ ತಾಯ್ತಂದೆಯರಿಗೂ ಅದರಲ್ಲಿ ಕೈಹಾಕಲು ಹಕ್ಕಿಲ್ಲ.'

ಮಾತಿನ ಭರದಲ್ಲಿ 'ತಾಯ್ತಂದೆಯರಿಗೂ ಹಕ್ಕಿಲ್ಲ' ಎಂದೆನಲ್ಲವೆ? ಒಂದು ಕ್ಷಣ ಮಾತು ನಿಲ್ಲಿಸಿಬಿಟ್ಟು, ಇದೆಲ್ಲಿಂದ ಬಂತು ಎಂದು ಯೋಚಿಸಿದೆ. ನನ್ನ ಮೆಡಿಕಲ್ ಕಾಲೇಜಿನ ಹಾಸ್ಟೆಲ್ಲಿನಲ್ಲಿದ್ದ ಸ್ನೇಹಿತನ ನೆನಪಾಯಿತು. ಅವನೋ ಅದ್ಭುತ ಕಲಾಕಾರ. ಅಂಥವನನ್ನು ವೈದ್ಯನಾಗಲು ಒತ್ತಾಯಿಸಿ ಹೆತ್ತವರು ಬಂದೋಬಸ್ತು ಮಾಡಿ ಕಳಿಸಿದ್ದರು. ಅವನು ಪುಸ್ತಕಗಳಿಂದ ದೂರವಾಗಿ ಸಿಗರೇಟು, ಮದ್ಯಪಾನದಲ್ಲಿ ಛಿಂದಾಸಾಗಿದ್ದ. ಮೊದಲ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣನಾದಾಗ ಸಂಭ್ರಮಿಸಿದ್ದೂ ಸಂಭ್ರಮಿಸಿದ್ದೇ. ಆದರೆ ಆ ಸಂಭ್ರಮ ಹೆಚ್ಚುಕಾಲ ಉಳಿಯಲಿಲ್ಲ. ಅವನಮ್ಮ ಅದೇ ಊರಿನಲ್ಲಿ ಮನೆಮಾಡಿ ಅವನ ಮೇಲೆ ಹದ್ದಿನ ಕಣ್ಣಿಟ್ಟಳು. ಸಾಕಾಗದ್ದಕ್ಕೆ ಅವನು ರಚಿಸಿದ ಚಿತ್ರಗಳನ್ನು ಅವನೆದುರಿಗೇ ಸುಟ್ಟುಹಾಕಿದಳು. ಪರಿಣಾಮ? ಆಘಾತ ತಾಳಲಾರದೆ ನೇಣಿಗೆ ಶರಣಾದ. ಕೆಲವು ತಾಯ್ತಂದೆಯರು ಮಕ್ಕಳನ್ನು ಪ್ರತಿಷ್ಠಿತ ಶಾಲಾಕಾಲೇಜುಗಳಲ್ಲಿ ಸೇರಿಸಿ ಹೆಚ್ಚಿನಂಕ ಗಳಿಸಬೇಕೆಂಬ ತಮ್ಮ ಕನಸನ್ನು ಹೇರಿದಾಗ ಮಕ್ಕಳಿಗಾಗುವ ದಯನೀಯ ಸ್ಥಿತಿಯನ್ನು ಎಷ್ಟು ಜನ ಅರ್ಥಮಾಡಿಕೊಂಡಿದ್ದಾರೆ?

ಮತ್ತೆ ವಾಸ್ತವಿಕ ಪ್ರಪಂಚಕ್ಕೆ ಬಂದೆ.

'ಅಮಲಾ, ನಿಮ್ಮಲ್ಲೊಂದು ದ್ವಂದ್ವವಿದೆ. ಅಂಗದ್ ಒಂದುಕಡೆ ಪ್ರಣಯಭರಿತ ಸಂಗಾತಿಯಾಗಿ ನಿಮ್ಮ ಕುತೂಹಲವನ್ನೂ ಕಾಮವನ್ನೂ ಕೆರಳಿಸುತ್ತ ಮೈ ಜುಮ್ಮೆನ್ನುವಂತೆ ಕಾಮಸುಖದಲ್ಲಿ ಪಾಲುಗೊಳ್ಳಬೇಕು ಎನ್ನುತ್ತೀರಿ. ಇನ್ನೊಂದುಕಡೆ ನಿಮ್ಮ ಗೃಹಕಾರ್ಯಗಳಲ್ಲಿ ಬಲಗೈ ಬಂಟ, ನಿಮ್ಮ ವೃತ್ತಿಯಲ್ಲಿ ಸಹಾಯಕ, ನಿಮ್ಮ ಕಾರ್ ಡ್ರೈವರ್ ಆಗಬೇಕು ಎನ್ನುತ್ತೀರಿ. ಅಂದರೆ, ಒಂದು ಕಡೆ ಅವರಿಗೆ ಸ್ವಂತಿಕೆ ಇರಬೇಕು ಎನ್ನುವವರು ಇನ್ನೊಂದು ಕಡೆ ಸ್ವಂತಿಕೆ ಇರಬಾರದು ಎನ್ನುತ್ತಿದ್ದೀರಿ. ಪರಿಣಾಮ? ಅಂಗದ್ ಯಾವುದೇ ಒಂದನ್ನು ಸಾಧಿಸಿದರೂ ತೃಪ್ತಿಯಾಗದೆ, ಆಗದಿರುವ ಇನ್ನೊಂದನ್ನು ನೆನೆಯುತ್ತೀರಿ.'

'ಹೌದು, ಎರಡನ್ನು ಬಯಸುವಾಗ ಒಂದು ಸಿಗುವುದಿಲ್ಲ ಅಲ್ಲವೆ?' ಅಮಲಾ ನಿರಾಸೆಯನ್ನು ಸಮರ್ಥಿಸಿಕೊಂಡಳು. ನಾನು ನವಿರಾಗಿ ತಿದ್ದಿದೆ. 'ಹಾಗಲ್ಲ, ಎರಡನ್ನು ಬಯಸುವಾಗ ಒಂದು ಖಾತರಿಯಾಗಿ ಸಿಗುತ್ತದೆ, ಹಾಗೂ ಸಿಕ್ಕಿರುವುದು ನೀವು ಬಯಸಿದ್ದೇ ಆಗಿರುತ್ತದೆ. ಅಲ್ಲವೆ?'

'ಆಯಿತು, ಒಂದುವೇಳೆ ನಾನು ಬಯಸಿದ್ದು ಸಿಕ್ಕಿತು ಎಂದಿಟ್ಟುಕೊಳ್ಳಿ. ಅದು ನನ್ನ ನಿರೀಕ್ಷೆಗೆ ತಕ್ಕಂತೆ ಇರದಿದ್ದರೆ?'

'ನಿಮ್ಮ ನಿರೀಕ್ಷೆಗೆ ತಕ್ಕಂತೆ ಇಲ್ಲವೆಂದಾದರೆ ಅವರು ಬದಲಾಗುವ ದಿಕ್ಕಿನತ್ತ ನೀವೂ ತಿರುಗಿಕೊಂಡರೆ ಆಯಿತು, ನೀವಿಬ್ಬರೂ ಒಂದೇಕಡೆ ಇರುತ್ತೀರಿ.' ಎಂದೆ. ಅರ್ಥವಾಗಲು ಅದೇ ಮರದ ಉದಾಹರಣೆ ಕೊಟ್ಟೆ. 'ಬಿಸಿಲಲ್ಲಿ ಮರದ ಕೆಳಗೆ ಕುಳಿತಾಗ ನೆರಳು ಚಲಿಸುತ್ತಿದ್ದರೆ ಏನು ಮಾಡುತ್ತೇವೆ? ಅದಕ್ಕೆ ತಕ್ಕಂತೆ ಮೈಬಾಗಿಸುತ್ತ ಕೂಡುವುದಿಲ್ಲ. ಅದು ಚಲಿಸಿದಂತೆ ನಾವೂ ಜಾಗ ಬದಲಾಯಿಸುತ್ತೇವೆ. ನೆರಳಿರುವ ಕಡೆಗೆ ನಾವು ಹೋಗಬೇಕೇ ಹೊರತು ಅದನ್ನು ನಮ್ಮ ಕಡೆಗೆ ತರಲು ಸಾಧ್ಯವಿಲ್ಲ.'

ಆಗ ಅಂಗದ್ ಏನು ಮಾಡುತ್ತಿದ್ದ ಮುಂದಿನ ಸಲ ಹೇಳುತ್ತೇನೆ.

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: www.medisex.org